ಪ್ರಶ್ನೆ ಬಾಗಿಲ ಮರೆಯಲ್ಲಿ ನಿಂತ ನನ್ನ ಎದೆಯೊಳಗೆ ಸರಕ್ಕನೆ ಹೊಕ್ಕುಬಿಟ್ಟಿತ್ತು. ಪಾರುಗೆ ಏನೋ ಆಗಬಾರದ್ದು ಆಗಿದೆಯೆಂದು ಅರ್ಥವಾಗಿತ್ತೇ ಹೊರತು ಏನೆಂದು ಸ್ಪಷ್ಟವಾಗಿರಲಿಲ್ಲ. ಶೇಷತ್ತೆಯ ಅಳು, ಅಮ್ಮನ ಪಿಸುಗುಟ್ಟುವಿಕೆ ಯಾವುದೋ ನಿಗೂಢ ಅರ್ಥವನ್ನು ನನ್ನೊಳಗೇ ಹುಟ್ಟಿಸುತ್ತಿದ್ದ ಗಳಿಗೆಯದು. ಅದೆಷ್ಟು ಹೊತ್ತು ಅವರಿಬ್ಬರ ಪಿಸುಪಿಸು ಮಾತು ಸಾಗಿತೋ ತಿಳಿಯದು.

ಇಬ್ಬರಿಗೂ ತಿಳಿಯದ ಹಾಗೆ ಕಳ್ಳ ಹೆಜ್ಜೆಯಲ್ಲಿ ಉಪ್ಪರಿಗೆ ಮೆಟ್ಟಿಲೇರಿ ಕೋಣೆ ಸೇರಿ ಮಂಚದ ಮೇಲೆ ಬೋರಲು ಬಿದ್ದು ಸುಮ್ಮನೆ ತಾರಸಿ ನೋಡುತ್ತಾ ಮಲಗಿದೆನೆಂದಷ್ಟೇ ಈಗ ನೆನಪಿಗೆ ಬರುತ್ತಿರುವುದು. ಮಾತುಗಳು ಅರ್ಥವಾಗಿದ್ದಕ್ಕಿಂತಾ ಹೆಚ್ಚಾಗಿ ಆಘಾತವಾಗಿತ್ತು. ಕಿವಿಯಲ್ಲಿ ಅವವೇ ಮಾತುಗಳು ಒಂದೇ ಸಮನೆ ಗುಂಯ್ಯಿಗುಡತೊಡಗಿದ್ದವು. ಚೌಕಿಯಲ್ಲಿ ಕುಳಿತ ಇಬ್ಬರು ಹೆಂಗಸರ ದುಗುಡದ ಮಾತುಗಳು ಮತ್ತೆಮತ್ತೆ ಮನಃಪಟಲದಲ್ಲಿ ಮೂಡಿ, ಅಲ್ಲಿಯವರೆಗೂ ತಿಳಿಯದ ಯಾವುದೋ ನಿಗೂಢಾರ್ಥವಿರುವ ರಹಸ್ಯವನ್ನು ನನ್ನಲ್ಲಿ ಬಿತ್ತರಿಸುತ್ತಿತ್ತು.

ಪಾರುಗೆ ಗರ್ಭಕೋಶವಿಲ್ಲವೆಂದರೇನು ಅರ್ಥ? ಗರ್ಭಕೋಶವಿಲ್ಲದ ಪಾರು ಇಷ್ಟು ಚಂದದ ಹುಡುಗಿಯಾಗಿದ್ದಾದರೂ ಹೇಗೆ? ಪಾರು ಹಾಗಾದರೆ ಹೆಣ್ಣೇ ಅಥವಾ ಗಂಡೇ? ಎರಡೂ ಅಲ್ಲದ ಪಾರು ಮತ್ತೇನಾದರೂ ಆಗಿರಬಹುದೇ? ನನಗೆಷ್ಟು ಅರ್ಥವಾಯಿತೆಂದು ತಿಳಿಯದಿದ್ದರೂ ಏನನ್ನೋ ಕಳೆದುಕೊಂಡ ಭಾವ ಅಷ್ಟರೊಳಗೇ ನನ್ನನ್ನು ಆವರಿಸಿಕೊಳ್ಳತೊಡಗಿತ್ತು. ಒಂದು ರೀತಿಯ ಹತಾಶೆ, ನಿರಾಶೆ, ಆಕ್ರೋಶ! ಎಲ್ಲಾ ತಿಳಿದೂ ಪಾರು ಅದೆಷ್ಟು ಅಮಾಯಕಳಂತೆ ನಾನು ಕೇಳುತ್ತೇನೆಂದೇ ದುಂಡಗಿನ ಮಲ್ಲಿಗೆ ಹೂವಿನ ದಂಡೆಯನ್ನೇ ತನ್ನ ನೋಟ್ಸ್‌ನಲ್ಲಿ ಕಟ್ಟುತ್ತಿದ್ದಾಳೆ! ಬೇಕೆಂದೇ ಕೆಂಡಸಂಪಿಗೆ ಮುಡಿದು ಗಾಢ ಪರಿಮಳ ಬೀರುತ್ತಿದ್ದಾಳೆ!

ಅಂದಿಡೀ ರಾತ್ರಿ ನಾನು ನಿದ್ದೆ ಮಾಡಲಿಲ್ಲ. ಏನಾಗುತ್ತಿದೆಯೆಂದೂ ನನಗೆ ಅರ್ಥವಾಗಲಿಲ್ಲ. ನನಗೆ ತಿಳಿಯದ ಹಾಗೆ ಪಾರು ನನ್ನ ಹೃದಯವನ್ನು ಕಸಿದುಕೊಂಡಿದ್ದಳು. ಪ್ರೀತಿಯ ಬಗ್ಗೆ ನಾನಾಗಲೀ ಅವಳಾಗಲೀ ಎಂದೂ ಮಾತನಾಡದಿದ್ದರೂ ನಮ್ಮಿಬ್ಬರ ಅಂತರಂಗದ ಭಾಷೆ ಒಂದೇ ಆಗಿತ್ತು. ಕಾಲೇಜಿನಲ್ಲಿ ಕೆಲ ಸ್ನೇಹಿತರು ಛೇಡಿಸುವಷ್ಟು ಅಲ್ಲಲ್ಲಿ ಪ್ರಕಟಗೊಂಡಿದ್ದೂ ಇತ್ತು. ಗರ್ಭಕೋಶವಿಲ್ಲದ ಪಾರು ಹಿಂದೆ ನಾನು ಸುತ್ತುತ್ತಿದ್ದೆನೆಂದು ಉಳಿದವರಿಗೆ ತಿಳಿದರೆ? ನೋವು, ಹತಾಶೆಯ ಜೊತೆಗೆ ಒಂದು ಸಣ್ಣ ಅವಮಾನದ ಕಿಡಿ ಅದು ಹೇಗೋ ನನ್ನೊಳಗೇ ಹುಟ್ಟಿಕೊಂಡೂಬಿಟ್ಟಿತ್ತು.

ಎರಡು ದಿನವಾದರೂ ವಿಷಯ ನನ್ನ ತಲೆಯಿಂದಾಚೆ ಹೊಗಲಿಲ್ಲ. ಕೂತಾಗ, ನಿಂತಾಗ 'ಪಾರುಗೆ ಗರ್ಭಕೋಶವಿಲ್ಲವಂತೆ!' ಮಾತೇ ತಲೆಯಲ್ಲಿ ಗುಂಯಿಗುಟ್ಟುತ್ತಿತ್ತು. ಅಂದು

